ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

ಸಂಖ್ಯೆ: ಕಾಶಿಇ/ಮಾತಂವಿ/17/ಟೆಲಿಶಿಕ್ಷಣ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 12/09/2017

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ 73 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಟೆಲಿಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಇಡಿ/228/ಮಾಹಿತಿ/2014 ಬೆಂಗಳೂರು ದಿ. 16/03/2015
2. ಈ ಕಛೇರಿ ಪತ್ರದ ಸಮಸಂಖ್ಯೆ: ಕಾಶಿಇ/ಮಾತಂವಿ/17/ ಟೆಲಿಎಜುಕೇಷನ್/2017-18. ದಿ.31/07/2017 ಮತ್ತು 24/07/2017
3. ಅಧ್ಯಕ್ಷರು, ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ ಐ.ಐ.ಎಂ.ಬೆಂಗಳೂರು & ಒಕ್ಕೂಟ ಸಂಸ್ಥೆಗಳು ಬೆಂಗಳೂರು ಅವರ ಪತ್ರ ದಿನಾಂಕ: 14/08/2017

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿನ 64 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳೂ ಸೇರಿದಂತೆ ಒಟ್ಟು 73 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಉಪಗ್ರಹ-ಇಂಟರ್ನೆಟ್ ಎರಡೂ ತಂತ್ರಜ್ಞಾನವನ್ನು ಒಳಗೊಂಡ ಹೈಬ್ರೀಡ್ ತಂತ್ರಜ್ಞಾನ ಆಧಾರಿತ ಟೆಲಿಶಿಕ್ಷಣ ಸೌಲಭ್ಯವನ್ನು ಬಳಸಿಕೊಂಡು ಆಂಗ್ಲಭಾಷಾ ಪ್ರಾವೀಣ್ಯತೆಯನ್ನು ಒದಗಿಸುವ ಸಂಬಂಧ ಟೆಲಿಎಜುಕೇಷನ್ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲಾಗಿರುತ್ತದೆ. 2ನೇ ಆಗಸ್ಟ್,2017 ರಿಂದ 2017-18ನೇ ಸಾಲಿನ ತರಗತಿಗಳನ್ನು ಪ್ರಾರಂಭಿಸಲಾಗಿದೆ.

ಈ ಕಾರ್ಯಕ್ರಮವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ಸದರಿ 73 ಕಾಲೇಜುಗಳಲ್ಲಿ ಪ್ರತಿ ಕಾಲೇಜಿಗೆ ಒಬ್ಬ ಉಪನ್ಯಾಸಕರನ್ನು ಯೋಜನಾ ಸಂಯೋಜಕರನ್ನಾಗಿ ನೇಮಿಸುವಂತೆ ಉಲ್ಲೇಖ(3)ರ ಪತ್ರದಲ್ಲಿ ಕೋರಲಾಗಿರುತ್ತದೆ. ಆದ್ದರಿಂದ ಕೂಡಲೇ ಪ್ರತಿ ಕಾಲೇಜಿನಲ್ಲಿ ಒಬ್ಬ ಉಪನ್ಯಾಸಕರನ್ನು ಟೆಲಿಶಿಕ್ಷಣ ಸಂಯೋಜಕರನ್ನಾಗಿ ಗುರುತಿಸಿ ಅವರ ಹೆಸರು, ದೂರವಾಣಿ ಮತ್ತು ಈ-ಮೇಲ್ ವಿಳಾಸದ ವಿವರಗಳನ್ನು ಅಧ್ಯಕ್ಷರು, ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 076 ಇವರಿಗೆ ನೀಡುವಂತೆ ಸದರಿ 73 ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಈ ಪ್ರಕಾರವಾಗಿ ಗುರುತಿಸಲಾಗುವ ಟೆಲಿಶಿಕ್ಷಣ ಸಂಯೋಜಕರು ಟೆಲಿಶಿಕ್ಷಣ ತರಗತಿಗಳ ಸುಗಮ ನಿರ್ವಹಣೆ, ಟೆಲಿಶಿಕ್ಷಣ ತರಗತಿಗಳಿಗೆ ವಿದ್ಯಾರ್ಥಿಗಳ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ತರಗತಿಗಳ ಪೂರ್ಣ ಉಪಯೋಗ ಪಡೆಯುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು, ಟೆಲಿಶಿಕ್ಷಣ ಉಪಕರಣಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ಮತ್ತು ಅಗತ್ಯವಾದ ವರದಿಗಳನ್ನು ಐಐಎಂಬಿಗೆ ಮತ್ತು ಇಲಾಖೆಗೆ ಸಲ್ಲಿಸುವುದು ಇವೇ ಮುಂತಾದ ಕಾರ್ಯಗಳ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

ಟೆಲಿ ಎಜುಕೇಶನ್ ಸಂಬಂಧದಲ್ಲಿ ತಾಂತ್ರಿಕ ಸಮಸ್ಯೆಗಳಾಗಲೀ ಅಥವಾ ಇನ್ನಿತರ ಯಾವುದೇ ಸಮಸ್ಯೆಗಳಿದ್ದಲ್ಲಿ ಕಾಲೇಜು ಸಿಬ್ಬಂದಿಗಳು/ವಿದ್ಯಾರ್ಥಿಗಳು ಸಂಪರ್ಕಿಸಬೇಕಾದ ವಿವರಗಳು ಈ ಕೆಳಗಿನಂತಿದೆ:

1. ಪ್ರತಿ ಕಾಲೇಜಿಗೆ ಕಾಲೇಜ್ ಇನ್ ಚಾರ್ಜ ಒಬ್ಬರನ್ನು ನೇಮಕ ಮಾಡಿದ್ದು, ಸಮಸ್ಯೆಗಳಿದ್ದಲ್ಲಿ ಮೊದಲಿಗೆ ಕಾಲೇಜ್ ಇನ್ ಚಾರ್ಜ್‌ಗಳನ್ನು ಸಂಪರ್ಕಿಸತಕ್ಕದ್ದು.
2. ಕಾಲೇಜ್ ಇನ್‌ಚಾರ್ಜ ಇಂದ ಸಮಸ್ಯೆಗೆ ಪರಿಹಾರ ಸಿಗದಿದ್ದಲ್ಲಿ ಈ ಕೆಳಗಿನ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ:

- ಅಭಿಜಿತ್- Operations Head (Technical) - +919591930555

- ಸುಧಾಕರ್ – Operations Head (Administrative) - +91 9071772193
- ಮಂಜುನಾಥ್– Programmes Head - +91 9845627507

(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.)

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

ಟೆಲಿಶಿಕ್ಷಣ ಯೋಜನೆಯಲ್ಲಿರುವ 73 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ- ಮೇಲೆ ತಿಳಿಸಿರುವಂತೆ ಕೂಡಲೇ ಕ್ರಮ ಕೈಗೊಂಡು ಈ ಕಛೇರಿಗೆ ಮಾಹಿತಿ ನೀಡುವಂತೆ ಸೂಚಿಸಿದೆ.

ಪ್ರತಿಯನ್ನು:

1) Chairman, Centre for Public Policy, Indian Institute of Management Bangalore, Bannerghatta Road, Bangalore -560 076.
2) ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ- ಮಾಹಿತಿಗಾಗಿ
3) ಕಛೇರಿ ಪ್ರತಿ